ವಿಪರೀತ ಆಯಾಸ...

ಆ ಊರಿನಲ್ಲಿದ್ದ ಹೋಟೆಲ್‌ನಲ್ಲಿ ರೂಮ್ ಮಾಡಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ. ಅವರಿಬ್ಬರೂ ರೂಮಿಗೇ ಊಟ ತರಿಸಿಕೊಂಡು ಮಾಡಿದ್ದರು. ಅನ್ನ ಗಂಟಲಲ್ಲಿ ಇಳಿಯುವುದೆ? ಸುಸ್ತು ಮತ್ತು ಸಂಕಟ ಜಾಸ್ತಿಯಾಗುತ್ತದೆ ಎಂದು ಬಲವಂತದಿಂದ ನಾಲ್ಕು ತುತ್ತು ತಿಂದಿದ್ದರು. ನಿದ್ದೆ ಬರುತ್ತಿಲ್ಲ. ಅದೇನು ಒಳ್ಳೆಯ ಲಾಡ್ಜ್ ಅಲ್ಲ. ರಕ್ತ ಕುಡಿಯಲು ತಿಗಣೆಗಳ ದೊಡ್ಡ ಹಿಂಡೇ ಇತ್ತು. ತೆರೆದ ಕಿಟಕಿಯ ಮೂಲಕ ಈಗ ಅರುಂಧತಿ ಹೊರಗಿನ ದೃಶ್ಯ ನೋಡುತ್ತಿದ್ದಾಳೆ. ಕತ್ತಲಿನ ನಿಶ್ಶಬ್ದ ರಾತ್ರಿ. ಆಗ ಕಾರೊಂದು ರಸ್ತೆ ತಿರುವಿನಲ್ಲಿ ನಿಂತುಕೊಂಡಿತು. ಅದರಿಂದ ಯುವಕನೊಬ್ಬ ಇಳಿದು ಗಾಬರಿಯಿಂದ ಚಡಪಡಿಸುತ್ತಿರುವುದನ್ನು ಕಂಡಳು. ಆ ಯುವಕನನ್ನು ಗುರುತಿಸಿದಳು. ಅವಳ ಬಾಯಿಂದ ಪರಮಾಶ್ಚರ್ಯದ ಉದ್ಗಾರ.

'ಅರೆ... ಅರೆ ಸುರೇಂದ್ರ ಈ ಊರಿಗೆ ಯಾಕೆ ಬಂದಿದ್ದಾನೆ? ಈ ಕಾರು ನಮ್ಮದು' ಎಂದು ಕೂಗಿಕೊಂಡಳು. ಮದಂತ ಈಗ ಎದ್ದು ನಿಂತು 'ನಿಮ್ಮ ಕಾರಿನಲ್ಲಿ ಸುರೇಂದ್ರ ಈ ಊರಿಗೆ ಬಂದಿದ್ದಾನೆ ಅಂದರೆ ಅವನ ಜೊತೆ ನಿಮ್ಮ ಮಗಳು ಕಾವ್ಯ ಸಹ ಇರುತ್ತಾಳೆ. ಏಕೆಂದರೆ ಸುರೇಂದ್ರ ಒಬ್ಬನೇ ಈ ಊರಿಗೆ ಬರಲಾರ.'

ಈಗ ಅರುಂಧತಿ ಮತ್ತು ಮದಂತ ಆತುರದಿಂದ ಹೊರಗೆ ಬಂದರು. ಯಾರಾದರೂ ಡಾಕ್ಟರ್ ಸಿಗುತ್ತಾರೇನೋ ಎಂದು ಪರದಾಡುತ್ತಿದ್ದ ಸುರೇಂದ್ರನಿಗೆ ಅರುಂಧತಿ ಕಂಡಳು. ಅಲ್ಲಿ ಅವಳನ್ನು ಅವನು ನಿರೀಕ್ಷಿಸಿರಲಿಲ್ಲ. ಅರುಂಧತಿ ಅವನ ಮುಖ ನೋಡಿದಳು. ನಂತರ ಅವಳ ದೃಷ್ಟಿ ಕಾರಿನತ್ತ ಹರಿಯಿತು. ರಕ್ತದ ಮಡುವಿನಲ್ಲಿ ಕಾವ್ಯ ಕೊನೆಯುಸಿರು ಎಳೆಯುತ್ತಿದ್ದಾಳೆ. ದಡದಡನೆ ನುಗ್ಗಿ ಕಾರಿನ ಡೋರ್‌ಅನ್ನು ತೆಗೆದು ಮಗಳನ್ನು ಬಿಗಿದಪ್ಪಿಕೊಂಡಳು. ಪುನಃ ರಕ್ತ ವಾಂತಿಯಾಯಿತು. ಅರುಂಧತಿ ಗಾಬರಿಯಿಂದ ಕಿರುಚಿದಳು. ಅದನ್ನು ಕೇಳಿ ಮದಂತ ಆತುರದಿಂದ ಓಡಿಬಂದ.

ಅವನಿಗೆ ಗೊತ್ತಾಗಿ ಹೋಯಿತು. ಕ್ಷುದ್ರಶಕ್ತಿಯ ಪ್ರಯೋಗ ನಡೆದಿದೆ. ಕೊನೆಯ ಹಂತದಲ್ಲಿ ತಾನು ಯಾವ ರೀತಿಯಲ್ಲಿಯೂ ಸಹ ಸಹಾಯ ಮಾಡಲು ಆಗುತ್ತಿಲ್ಲ. ಅರುಂಧತಿ ಅಳುತ್ತಿದ್ದಾಳೆ. ಸುರೇಂದ್ರ ಪೆಚ್ಚಾಗಿ ನಿಂತಿದ್ದಾನೆ. ಮದಂತ ಪರಿತಪಿಸುತ್ತಿದ್ದಾನೆ. ಏಕೆಂದರೆ ಈ ಕಾವ್ಯ ಹಿಂದೆ ಒಂದು ಸಲ ಇವನ ಪ್ರಾಣವನ್ನು ಉಳಿಸಿ ಸಹಾಯ ಮಾಡಿದ್ದಳು. ಈಗ ಅವಳಿಗೆ ಉಪಕಾರ ಮಾಡಲು ಆಗುತ್ತಿಲ್ಲವಲ್ಲ ಎಂದು ಹಲುಬುತ್ತಿದ್ದಾನೆ. ಕಾವ್ಯ ಕಣ್ಣುಗಳನ್ನು ತೆರೆದಳು. ತನ್ನ ತಾಯಿ ಮತ್ತು ಮದಂತನ ಕಡೆ ನೋಡಿದಳು. ಅವಳ ಮುಖ, ಕತ್ತು ಮತ್ತು ಎದೆಯ ಭಾಗವೆಲ್ಲಾ ರಕ್ತಮಯವಾಗಿದೆ. ಕಾವ್ಯ ಈಗ ಮದಂತನ ಕೈ ಹಿಡಿದುಕೊಂಡು ತುಂಬಾ ಕಷ್ಟದಿಂದ 'ನನ್ನ ತಾ... ತಾ... ತಾಯಿಯನ್ನು ಕಾ... ಕಾ.. ಕಾಪಾಡಿ' ಎಂದಳು.

ಬಾಯಿಂದ ರಕ್ತ ಈಗ ಬೊಕ್ ಬೊಕ್ ಎಂದು ಬುಗ್ಗೆಯ ರೀತಿಯಲ್ಲಿ ಹೊರಬರಲಾರಂಭಿಸಿತು. ಕಾವ್ಯ ಕೊನೆಯುಸಿರೆಳೆದಳು. ಕಣ್ಣುಗಳು ತೆರೆದುಕೊಂಡೇ ಇದೆ. ಆದರೆ ಚಲನೆ ಮಾತ್ರ ಇರಲಿಲ್ಲ.

ಅರುಂಧತಿ ಮಗಳ ಹೆಣವನ್ನು ಬಿಗಿಯಾಗಿ ತಬ್ಬಿಕೊಂಡು ಜೋರಾಗಿ ಅಳುತ್ತಿದ್ದಾಳೆ. ಹೋಟೆಲ್‌ನವರು ಹೊರಗೆ ಬಂದರು. ಮದಂತ ಈಗ ಅಲ್ಲಿಂದ ಬಿರು ಬಿರನೆ ನಡೆಯುತ್ತಿದ್ದಾನೆ ಸ್ಮಶಾನದ ಕಡೆಗೆ.

ಸುರೇಂದ್ರ ಎರಡು ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಅಳುತ್ತಲೇ 'ನಾವು... ನಾವು ಮಾಂತ್ರಿಕ ರುದ್ರನ ಮನೆಗೆ ಹೋಗಿ ದೊಡ್ಡ ತಪ್ಪು ಮಾಡಿದೆವು. ನಾವಲ್ಲಿಗೆ ಹೋಗಬಾರದಿತ್ತು.'

ಇದನ್ನು ಕೇಳಿ ದುಃಖದಿಂದ ಪ್ರಲಾಪಿಸುತ್ತಿದ್ದ ಅರುಂಧತಿ ಸಹ ಬೆಚ್ಚಿಬಿದ್ದಳು. ಸರ್ರನೆ ತಲೆಯೆತ್ತಿ 'ಏನು... ನೀವು ನೀವು ರುದ್ರಣ್ಣನ ಮನೆಗೆ ಹೋಗಿದ್ರಾ?'

ಸುರೇಂದ್ರ ತಲೆಯಾಡಿಸಿದ. ಅರುಂಧತಿ ದುಃಖ ಮತ್ತು ಕೋಪದಿಂದ 'ನೀವು ಅಲ್ಲಿಗ್ಯಾಕೆ ಹೋಗಿದ್ರಿ?'

ಸುರೇಂದ್ರ 'ತನ್ನ ತಾಯಿಯ ತವರು ಮನೆ ಅಂತ ಕಾವ್ಯ ಕರೆದುಕೊಂಡು ಬಂದಳು.'

ಅರುಂಧತಿ ದುಃಖ, ಉದ್ವೇಗದಿಂದ ಈಗ ತಲೆಯನ್ನು ಮಗಳ ಹೆಣಕ್ಕೆ ಗುದ್ದಿಸುತ್ತಿದ್ದಾಳೆ. ಹೋಟೆಲ್‌ನ ಕೆಲವೇ ಮಂದಿ ಬೆರಗಾಗಿ ನೋಡುತ್ತಿದ್ದಾರೆ. ಅವರಿಗೇನೂ ಗೊತ್ತಿಲ್ಲ. ಅರುಂಧತಿಗೆ ಈಗ ತನ್ನ ಅಣ್ಣಯ್ಯನ ಮೇಲೆ ವಿಪರೀತ ಕೋಪ ಬರುತ್ತಿದೆ. ಇದೆಂತಹ ಕುರುಡು ಸೇಡು. ಇದಕ್ಕೆ ಕೊನೆಯೇ ಇಲ್ಲವೆ? ನನ್ನ ಗಂಡ ತಪ್ಪು ಮಾಡಿದ ಅಂತ ಇಡೀ ಸಂಸಾರವನ್ನೇ ಕ್ಷುದ್ರಶಕ್ತಿಗೆ ಬಲಿ ಕೊಡುವುದರಲ್ಲಿ ಅರ್ಥ ಇದೆಯೇ? ನನ್ನ ಗಂಡ ಈ ಊರಿಗೆ ಬಂದಿದ್ದರು ಅಂದ ಮೇಲೆ ಅವರಿಗೂ ಸಹ ಒಂದು ಗತಿ ಕಾಣಿಸಿರುತ್ತಾನೆ. ಇಲ್ಲ... ನಾನು ಸುಮ್ಮನೆ ಬಿಡಲಾರೆ. ಅಣ್ಣಯ್ಯನನ್ನು ನೋಡಲೇಬೇಕು. ದುಃಖ, ಉದ್ವೇಗದ ಪರಾಕಾಷ್ಠೆಯಿಂದ ಅಳುತ್ತಿದ್ದಾಳೆ... ಕಂಪಿಸುತ್ತಿದ್ದಾಳೆ.

* * *

ರಾತ್ರಿ ಒಂದೂವರೆಯ ಸಮಯ. ಮದಂತ ಈಗ ಸ್ಮಶಾನದ ಗೇಟಿನ ಹತ್ತಿರ ಬಂದ. ಅದೇ ಸಮಯಕ್ಕೆ ಎದುರುಗಡೆಯಿಂದ ರುದ್ರನಾಗ ಮತ್ತು ಮಲ್ಲಿಗೆ ಬರುತ್ತಿದ್ದರು. ಆರು ಕಣ್ಣುಗಳ ಮಿಲನ. ಮಲ್ಲಿಗೆ ಈಗ ತನ್ನ ಮುಖವನ್ನು ಬೇರೆ ಕಡೆ ತಿರುಗಿಸಿಕೊಂಡಳು. ಮದಂತ ಗಂಭೀರವಾಗಿ 'ಗುರುಗಳೆ ನಿಮ್ಮ ಹತ್ತಿರ ಮಾತಾಡಬೇಕು.'

ರುದ್ರನಾಗ ಅವಳತ್ತ ತಿರುಗಿ 'ಮಲ್ಲಿಗೆ... ನೀನು ಮನೆಗೆ ಹೋಗು.'

'ಅವಳೂ ಸಹ ಇರಬೇಕು.'

ರುದ್ರನಾಗ ಗಡುಸಾಗಿ 'ಮಲ್ಲಿಗೆ ಈಗ ನೀನು ಮನೆಗೆ ಹೋಗುತ್ತೀಯ' ಎಂದ.

ಮುಂದಿನ ಮತ್ತೊಂದು ಕ್ಷಣದಲ್ಲಿ ಮಲ್ಲಿಗೆ ಅಲ್ಲಿ ನಿಲ್ಲಲಿಲ್ಲ. ಮದಂತ ವಿಷಾದದಿಂದ 'ಭಯದ ಗೂಡಿನಲ್ಲಿ ರೆಕ್ಕೆಗಳನ್ನು ಕತ್ತರಿಸಿರುವ ಪಕ್ಷಿಯಂತೆ ಬೆಳೆಸುತ್ತಿದ್ದೀರ' ಎಂದು ನಕ್ಕ.

ರುದ್ರನಾಗ ಕೋಪದಿಂದ 'ಊರನ್ನೇ ಬಿಟ್ಟು ಹೋಗುತ್ತೇನೆ ಅಂತ ಹೇಳಿ ಪುನಃ ಯಾಕೆ ನನ್ನ ತಂಗಿಯ ಜೊತೆ ಬಂದಿದ್ದೀಯ.'

'ಅಂದರೆ ನೀವು ಇದನ್ನು ನೋಡಿದ್ದರೂ ಸಹ ನಿಮ್ಮ ತಂಗಿಗೆ ಕಾಣಿಸಿಕೊಳ್ಳಲಿಲ್ಲ.'

'ಈಗ ಮುಖ್ಯ ವಿಷಯ ಹೇಳು.'

'ಮನೋಹರನಿಗೇನು ಮಾಡಿದ್ರಿ?'

'ನನ್ನ ಸೇಡಿಗೆ ಬಲಿ ನೀಡಿದೆ'.

'ಹಾಗಾದರೆ ನಿಮ್ಮ ತಂಗಿಯ ಎರಡನೆಯ ಮಗಳು ಕಾವ್ಯಳ ಮೇಲೆ..'

'ಹಸ್ತಚಂಡಿಕೆ ಪ್ರಯೋಗ ಮಾಡಿದೆವು. ತಂದೆ ಮತ್ತು ತಂಗಿಯನ್ನು ಮಲ್ಲಿಗೆಯ ಹಸ್ತದಿಂದಲೇ ಸಾಯುವಂತೆ ಮಾಡಿದೆ. ಉಳಿದಿರೋದು ಅರುಂಧತಿ ಮಾತ್ರ. ಅವಳನ್ನು ಸಹ ಅವಳ ಮಗಳೇ ನಾಳೆ ರಾತ್ರಿ ಮುಗಿಸುತ್ತಾಳೆ. ಅಲ್ಲಿಗೆ ನನ್ನ ಸೇಡು ತೀರುತ್ತದೆ' ಎಂದು ರುದ್ರನಾಗ ನಗಲಾರಂಭಿಸಿದ. ಅವನು ಮಾನವ ರೂಪದಲ್ಲಿರುವ ಮತ್ತೊಂದು ಪಿಶಾಚಿಯಂತೆ ಕಾಣುತ್ತಿದ್ದಾನೆ.

ಅದು ಸ್ಮಶಾನ!

ಮಧ್ಯರಾತ್ರಿ ಎರಡು ಗಂಟೆಯಾಗಿದೆ. ರುದ್ರನಾಗ ಮಾತಾಡುತ್ತಿದ್ದಾನೆ. ಗಹಗಹಿಸಿ ನಗುತ್ತಿದ್ದಾನೆ. ಅವನ ಎದುರಿಗೆ ಅವನ ಶಿಷ್ಯ ಮದಂತ ಕೈಗಳನ್ನು ಕಟ್ಟಿಕೊಂಡು ಗಂಭೀರವಾಗಿ ನಿಂತಿದ್ದಾನೆ.

ಮದಂತ 'ಗುರುಗಳೆ... ವೈಯಕ್ತಿಕ ಲಾಭ ಮತ್ತು ದ್ವೇಷಕ್ಕಾಗಿ ವಾಮಾಚಾರದ ವಿದ್ಯೆಯನ್ನು ಬಳಸುತ್ತಿರುವುದು ತಪ್ಪು.'

ಗಡುಸಾಗಿ 'ನಿನ್ನ ಉಪದೇಶ ನನಗೆ ಬೇಡ. ನಾನು ಅಂದುಕೊಂಡಿದ್ದು ನಡೆಯಲೇಬೇಕು.'

ಮದಂತ 'ನಿಮ್ಮ ಹೆಂಡತಿ ಮತ್ತು ಮಕ್ಕಳು ಸಾಯಲು ಕಾರಣ ಮನೋಹರ. ಆದರೆ ನೀವು ಕಾವ್ಯಳನ್ನು ಬಲಿ ತೆಗೆದುಕೊಂಡ್ರಿ. ಅದರೊಂದಿಗೆ ಬೇರೊಂದು ರೀತಿಯಲ್ಲಿ ಮಲ್ಲಿಗೆಯ ಬಾಳನ್ನು ಕತ್ತಲು ಮಾಡಿದ್ರಿ.'

ರುದ್ರನಾಗ ಗಡುಸಾಗಿ 'ಮಲ್ಲಿಗೆಗೆ ನಾನು ಏನೂ ಮಾಡುವುದಿಲ್ಲ.'

ಮದಂತ ವಿಷಾದದಿಂದ 'ಈಗ ಮಾಡಿರುವುದು ಸಾಲದೆ? ಮಲ್ಲಿಗೆಗೆ ಅಕ್ಷರ ಕಲಿಸಲಿಲ್ಲ. ನಾಗರಿಕತೆ ಕಲಿಸಲಿಲ್ಲ. ಹೆಣ್ಣಿನ ರೂಪದಲ್ಲಿರುವ ರಾಕ್ಷಸಿಯಂತೆ ಬೆಳೆಸಿದ್ರಿ. ಅವಳನ್ನು ನಿಮ್ಮ ಸೇಡು ತೀರಿಸಿಕೊಳ್ಳಲು ಅಸ್ತ್ರವಾಗಿ ಬಳಸಿಕೊಂಡಿರೇ ವಿನಃ ಅವಳ ಭವಿಷ್ಯದ ಬಗ್ಗೆ ಚಿಂತಿಸಲಿಲ್ಲ.' ರುದ್ರನಾಗ ಉದಾಸೀನದಿಂದ 'ನನಗೆ ಅದು ಅಗತ್ಯ ಅಂತ ಅನಿಸಲಿಲ್ಲ. ಅವಳನ್ನು ಸಾಯಿಸದೆ ಉಳಿಸುತ್ತಿದ್ದೇನೆ. ಅದೇ ಅವಳ ಪುಣ್ಯ.' ಮದಂತ ವ್ಯಂಗ್ಯವಾಗಿ 'ಏನೋ ಘನಕಾರ್ಯ ಮಾಡಿದವರಂತೆ ಮಾತಾಡುತ್ತಿದ್ದೀರ. ಒಬ್ಬನನ್ನು ಸಾಯಿಸಿದ್ದೀರ. ಮತ್ತೊಬ್ಬಳು ಬದುಕಿದ್ದೂ ಸಹ ಸತ್ತಂತೆ. ಉಳಿದಿರುವ ನಿಮ್ಮ ತಂಗಿಯನ್ನಾದರೂ ಬದುಕಲು ಬಿಡಿ.'

ರುದ್ರನಾಗ ಕೋಪದಿಂದ ಅಬ್ಬರಿಸುತ್ತಾ 'ನೀನು... ನೀನು ಅವರ ಪರ ಸೇರಿದ್ದೀಯಾ?'

'ಅಲ್ಲ ಮಾನವೀಯತೆಯ ಪರ ನಿಂತಿದ್ದೇನೆ. ನೀವು ನನ್ನ ಮಾಂತ್ರಿಕ ಗುರು. ಅದಕ್ಕಾಗಿ ವಿನಯದಿಂದ ಕೇಳಿಕೊಳ್ಳುತ್ತಿದ್ದೇನೆ.'